Total No. of Questions : 50 ] [ Total No. of Printed Pages : 4

Code No. : **105-K**

**Diploma in Physical Education**

# ಭಾಷಾ ಸಂಪದೀಕರಣ — ಕನ್ನಡ

# CONTENT ENRICHMENT IN LANGUAGE — KANNADA

Date : 03. 07. 2015 ]

Time : 10.00 A.M. to 1.00 P.M. ] [ Max. Marks : 80

***ಸೂಚನೆ :*** i) ಅಕ್ಷರಗಳನ್ನು ಸ್ಪಷ್ಟವಾಗಿ, ಸುಂದರವಾಗಿ ಬರೆಯಿರಿ.

ii) ಪ್ರಶ್ನೆ ಸಂಖ್ಯೆಗಳನ್ನು ತಪ್ಪದೇ ಬರೆಯಿರಿ.

iii) ಅನಾವಶ್ಯಕವಾಗಿ ಹಾಳೆಗಳನ್ನು ಬಳಸಬೇಡಿ.

I. ಈ ಕೆಳಗಿನವುಗಳಲ್ಲಿ ಯಾವುದಾದರೂ **ನಾಲ್ಕು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಯ ಉತ್ತರವು ಒಂದು ಪುಟಕ್ಕೆ ಮೀರದಿರಲಿ : $4 \times 5 = 20$

1) ಭಾಷೆಯ ವೈಶಿಷ್ಟ್ಯತೆಯ ಯಾವುದಾದರೂ ಐದನ್ನು ಸಂಕ್ಷಿಪ್ತವಾಗಿ ವಿವರಿಸಿ.

2) ಧ್ವನ್ಯಂಗಗಳು ಎಂದರೇನು ? ಧ್ವನ್ಯಂಗಗಳನ್ನು ಪಟ್ಟಿ ಮಾಡಿ. ಧ್ವನಿಯ ಉಚ್ಚಾರಣೆಯಲ್ಲಿ ಈ ಧ್ವನ್ಯಂಗಗಳ ಪಾತ್ರವನ್ನು ತಿಳಿಸಿ.

3) ಕನ್ನಡ ಲಿಪಿಗಳ ವರ್ಗೀಕರಣವನ್ನು ಬರೆದು, ಸಂಕ್ಷಿಪ್ತವಾಗಿ ವಿವರಿಸಿ.

4) ಕನ್ನಡ ಸಂಧಿಗಳು ಎಂದರೇನು ? ಯಾವುದಾದರೂ ಎರಡು ಕನ್ನಡ ಸಂಧಿಗಳನ್ನು ಎರಡೆರಡು ಉದಾಹರಣೆಗಳೊಂದಿಗೆ ಸಂಕ್ಷಿಪ್ತವಾಗಿ ಬರೆಯಿರಿ.

5) ಲೇಖನ ಚಿಹ್ನೆಗಳು ಎಂದರೇನು ? ಯಾವುದಾದರೂ ನಾಲ್ಕು ಲೇಖನ ಚಿಹ್ನೆಗಳನ್ನು ಒಂದೊಂದು ಉದಾಹರಣೆಯೊಂದಿಗೆ ವಿವರಿಸಿ.

6) ಪತ್ರಲೇಖನ ಹಾಗೂ ಪ್ರವಾಸ ಸಾಹಿತ್ಯದಿಂದಾಗುವ ಪ್ರಯೋಜನಗಳಾವುವು ?

II. ಈ ಕೆಳಗಿನವುಗಳಲ್ಲಿ ಯಾವುದಾದರೂ **ಹತ್ತು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಯ ಉತ್ತರವು ಅರ್ಧ ಪುಟಕ್ಕೆ ಮೀರದಿರಲಿ : $10 \times 3 = 30$

7) ಯಾದೃಚ್ಛಿಕತೆ ಧ್ವನಿ ಸಂಕೇತಗಳ ವ್ಯವಸ್ಥೆಯೇ ಭಾಷೆ. ವಿವರಿಸಿ.

8) ವ್ಯಕ್ತಿ ಭಾಷೆ, ಉಪ ಭಾಷೆ ಹಾಗೂ ಭಾಷೆ – ಇವುಗಳ ನಡುವಿನ ಸಂಬಂಧವನ್ನು ತಿಳಿಸಿ.

9) ಸ್ಪರ್ಶ ಹಾಗೂ ಕಂಪಿತ ಧ್ವನಿಗಳು ಎಂದರೇನು ? ಅವು ಯಾವುವು ?

10) ಘೋಷ ಮತ್ತು ಅಘೋಷ ಧ್ವನಿಗಳು ಎಂದರೇನು ? ಅವುಗಳನ್ನು ಹೆಸರಿಸಿ.

11) ಕಾಗುಣಿತ ಎಂದರೇನು ? ವ್ಯಂಜನಗಳನ್ನು ಗುಣಿತಾಕ್ಷರಗಳಾಗಿ ಬರೆಯುವಾಗ ಬಳಸುವ ಸ್ವರಚಿಹ್ನೆಗಳನ್ನು ಪಟ್ಟಿ ಮಾಡಿ.

12) ಒತ್ತಕ್ಷರಗಳು ಎಂದರೇನು ? ಒತ್ತಕ್ಷರದ ವಿಧಗಳನ್ನು ಉದಾಹರಣೆಯೊಂದಿಗೆ ವಿವರಿಸಿ.

13) ಲಿಂಗಗಳ ಮೂರು ವಿಧಗಳನ್ನು ಉದಾಹರಣೆಗಳೊಂದಿಗೆ ಸಂಕ್ಷಿಪ್ತವಾಗಿ ವಿವರಿಸಿ.

14) ಸಂಖ್ಯಾ ವಾಚಕ ಹಾಗೂ ಗುಣವಾಚಕಕ್ಕೆ ಇರುವ ವ್ಯತ್ಯಾಸವೇನು ? ಪ್ರತಿಯೊಂದಕ್ಕೂ ಎರಡೆರಡು ಉದಾಹರಣೆಗಳನ್ನು ಸೂಚಿಸಿ.

15) ಸಂಸ್ಕೃತ ಸಂಧಿಗಳಲ್ಲಿ ನಿಮಗಿಷ್ಟವಾದ ಯಾವುದಾದರೂ ಎರಡು ಸಂಧಿಗಳನ್ನು ಒಂದೊಂದು ಉದಾಹರಣೆಯೊಂದಿಗೆ ವಿವರಿಸಿ.

16) ವಾಕ್ಯ ಎಂದರೇನು ? ಅದರ ವಿಧಗಳು ಯಾವುವು ? ಪ್ರತಿಯೊಂದಕ್ಕೂ ಒಂದೊಂದು ಉದಾಹರಣೆಯನ್ನು ಕೊಡಿ.

17) ನುಡಿಬೆರಕೆ ಹಾಗೂ ನುಡಿ ಜಿಗಿತದ ನಡುವಿನ ವ್ಯತ್ಯಾಸಗಳನ್ನು ತಿಳಿಸಿ.

18) ಉಪಮಾಲಂಕಾರ ಎಂದರೇನು ? 'ಬಿರುಗಾಳಿ ಪೊಡೆಯಲ್ಕೆ ಫಲಿತ ಕದಳಿ, ಮುರಿದಿಳೆಗೊರಗುವಂತೆ ಲಕ್ಷ್ಮಣನ ಮಾತು ಕವಿ, ದೆರೆಗೆ ಬೀಳುವ ಮುನ್ನ ಹಮ್ಮೈಸಿ ಬಿದಳಂಗನೆ ಧರೆಗೆ ನಡುನಡುಗುತೆ' – ಈ ಸಾಲಿನಲ್ಲಿ ಉಪಮಾನ, ಉಪಮೇಯ, ಉಪಮಾನವಾಚಕ ಹಾಗೂ ಸಮಾನ ಧರ್ಮವನ್ನು ಗುರುತಿಸಿ. ಬರೆಯಿರಿ.

19) ಜಾನಪದ ಸಾಹಿತ್ಯದ ಬಗ್ಗೆ ವಿವರಿಸಿ.

20) ಷಟ್ಪದಿ ಎಂದರೇನು ? ಷಟ್ಪದಿಯ ವಿಧಗಳನ್ನು ಹೆಸರಿಸಿ.

III. ಈ ಕೆಳಗಿನವುಗಳಲ್ಲಿ ಯಾವುದಾದರೂ **ಏಳು** ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಯ ಉತ್ತರವು ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ : $7 \times 2 = 14$

21) ಪ್ಲೇಟೋ ಮತ್ತು ಫರ್ಡಿನೆಂಟ್ ಡಿ. ಸಸೂರ್ ರವರು ಭಾಷೆಯ ಬಗ್ಗೆ ನೀಡಿದ ವ್ಯಾಖ್ಯೆಗಳನ್ನು ತಿಳಿಸಿ.

22) ಪ್ರಾದೇಶಿಕ ಭಾಷೆ ಎಂದರೇನು ? ಭಾಷೆಯ ಹೆಸರನ್ನೇ ಹೊಂದಿರುವ ಯಾವುದಾದರೂ ಎರಡು ರಾಜ್ಯಗಳನ್ನು ಹೆಸರಿಸಿ.

23) ದಂತ್ಯ ಧ್ವನಿಗಳು ಎಂದರೇನು ? ಯಾವುದಾದರೂ ನಾಲ್ಕು ದಂತ್ಯ ಧ್ವನಿಗಳನ್ನು ತಿಳಿಸಿ.

24) ಕಂಠ್ಯ ಧ್ವನಿಗಳು ಎಂದರೇನು ? ಯಾವುದಾದರೂ ನಾಲ್ಕು ಕಂಠ್ಯ ಧ್ವನಿಗಳನ್ನು ಸೂಚಿಸಿ.

25) ಕನ್ನಡವನ್ನು ಕಂಪ್ಯೂಟರ್‌ಗೆ ಅಳವಡಿಸಲು ಬಳಸುವ ಎರಡು ತಂತ್ರಾಂಶಗಳು ಯಾವುವು ? ಇದನ್ನು ಅಭಿವೃದ್ಧಿಪಡಿಸಿದವರು ಯಾರು ?

26) ಲಿಪ್ಯಂತರ ಎಂದರೇನು ? ಎರಡು ಉದಾಹರಣೆಗಳನ್ನು ತಿಳಿಸಿ.

27) ಕೃದಂತ ಎಂದರೇನು ? ಇದರ ವಿಧಗಳನ್ನು ಹೆಸರಿಸಿ.

28) ವಿಭಕ್ತಿ ಪ್ರತ್ಯಯಗಳು ಎಂದರೇನು ? ಯಾವುದಾದರೂ ಎರಡು ವಿಭಕ್ತಿ ಪ್ರತ್ಯಯಗಳನ್ನು ಸೂಚಿಸಿ.

29) ಪ್ರಶ್ನಾರ್ಥಕ ವಾಕ್ಯ ಎಂದರೇನು ? ಎರಡು ಪ್ರಶ್ನಾರ್ಥಕ ವಾಕ್ಯಗಳನ್ನು ರಚಿಸಿ.

30) ತದ್ಭವ ಎಂದರೇನು ? ಮುಕ್ತಿ, ಚತುರ – ಈ ಪದಗಳ ತದ್ಭವ ರೂಪಗಳನ್ನು ಬರೆಯಿರಿ.

31) ಲಘು ಮತ್ತು ಗುರು ಎಂದರೇನು ?

32) ಕಾವ್ಯದ ಪ್ರಯೋಜನಗಳೇನು ?

IV. ಈ ಕೆಳಗಿನವುಗಳಲ್ಲಿ ಯಾವುದಾದರೂ **ಹತ್ತು** ಪ್ರಶ್ನೆಗಳಿಗೆ ಉತ್ತರಿಸಿ : $10 \times 1 = 10$

33) ಕನ್ನಡ ಭಾಷೆಯ ಯಾವುದಾದರೂ ಎರಡು ಉಪಭಾಷೆಗಳನ್ನು ತಿಳಿಸಿ.

34) ಆತ್ಮವಿರುವ ಯಾವುದೇ ಪ್ರಾಣಿಯ ಅನುಭವಗಳ ಅಭಿವ್ಯಕ್ತಿ ಅಭಿವ್ಯಕ್ತಿ ಭಾಷೆ ಹೀಗೆಂದವರು ಯಾರು ?

35) ಬಾಯಿಯಲ್ಲಿ ಗಾಳಿಯನ್ನು ನಿಲ್ಲಿಸಿ, ಮೃದು ತಾಲುವನ್ನು ಕೆಳಗಿಳಿಸಿದಾಗ ಮೂಗಿನ ಮೂಲಕ ಗಾಳಿಯು ಹಾದು ಹೋಗುವಾಗ ಹೊರಡುವ ಧ್ವನಿಗಳನ್ನು ಏನೆಂದು ಕರೆಯುತ್ತಾರೆ ?

36) ಬಸವಣ್ಣನವರ ಅಂಕಿತನಾಮವೇನು ?

37) ಎಂಟನೇ ಜ್ಞಾನಪೀಠ ಪ್ರಶಸ್ತಿಯನ್ನು ಪಡೆದ ಕನ್ನಡ ಸಾಹಿತಿಯನ್ನು ಹೆಸರಿಸಿ.

38) ಉಚ್ಛಾರಣೆ – ಇದರ ಸರಿರೂಪವೇನು ?

39) ಅವಳು ಚೆನ್ನಾಗಿ ಹಾಡಿದಳು – ಈ ವಾಕ್ಯದಲ್ಲಿನ ಅವ್ಯಯವನ್ನು ಗುರುತಿಸಿ.

40) ಸಂಸ್ಕೃತದಿಂದ ಕನ್ನಡಕ್ಕೆ ಬಂದ ಸ್ವರ ಯಾವುದು ?

41) ಅರಮನೆ – ಈ ಪದವನ್ನು ಬಿಡಿಸಿ, ಸಮಾಸವನ್ನು ಹೆಸರಿಸಿ.

42) ರೂಢನಾಮವನ್ನು ಅರ್ಥೈಸಿ.

43) ದ್ವಂದ್ವ ಸಮಾಸ ಎಂದರೇನು ?

44) ಅವನು ಪರೀಕ್ಷ ಬರೆಯುತ್ತಾನೆ – ಈ ವಾಕ್ಯವನ್ನು ಭೂತಕಾಲ ಪ್ರತ್ಯಯ ಬಳಸಿ ಬರೆಯಿರಿ.

V. ಈ ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ : 6 × 1 = 6

| *'ಅ'* | | *'ಬ'* |
|---|---|---|
| 45) ಕ್ರಿಕೆಟಿಗ | i) | ರನ್ನ |
| 46) ಗದಾಯುದ್ಧ | ii) | ರಾಘವಾಂಕ |
| 47) ಇಸ್ಕೂಲ್ | iii) | ಎಸ್.ಎಲ್. ಭೈರಪ್ಪ |
| 48) ಹರಿಶ್ಚಂದ್ರ ಕಾವ್ಯ | iv) | ಪದಗಳ ಹೊರ ಚಲನೆ |
| 49) ತಬ್ಬಲಿಯು ನೀನಾದೆ ಮಗನೆ | v) | ಸಂಚಿಯ ಹೊನ್ನಮ್ಮ |
| 50) ಹದಿಬದೆಯ ಧರ್ಮ | vi) | ಆದಿಸ್ವರಾಗಮ |